JUNE 20, 2025

AKASHAVANI - DHARWAD

PRADESH SAMACHARA (KANNADA) 12 PM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ರಾಜ್ಯ ಆರೋಗ್ಯ ಇಲಾಖೆ, ಸಂಚಾರಿ ಆರೋಗ್ಯ ಘಟಕಗಳ ಮೂಲಕ 15 ಕೋಟಿ 97 ಲಕ್ಷ ರೂಪಾಯಿ ವೆಚ್ಚದಲ್ಲಿ, ದುರ್ಗಮ ಮತ್ತು ಸಂಪರ್ಕ ರಹಿತ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ವಿಸ್ತರಿಸಲಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ ಗುಂಡೂರಾವ್ ತಿಳಿಸಿದ್ದಾರೆ. ಈ ಬಗ್ಗೆ ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಸಂಚಾರಿ ಚಿಕಿತ್ಸಾಲಯಗಳ ಮೂಲಕ, ಪರಿಶಿ ್ಟ ಜಾತಿ ಮತ್ತು ಪರಿಶಿ ್ಟ ಪಂಗಡದ ಜನಸಂಖ್ಯೆ ಹೆಚ್ಚಿರುವ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ರೋಗ ತಪಾಸಣೆ, ರೋಗ ನಿರ್ಣಯ, ಚಿಕಿತ್ಸೆ ಸೇರಿದಂತೆ ಆರೋಗ್ಯ ಸೇವೆಗಳನ್ನು ನೀಡಲಿವೆ ಎಂದಿದ್ದಾರೆ.

<><><>

ರಾಜ್ಯದ ಆಯ್ದ ಶಾಲಾ ವಿದ್ಯಾರ್ಥಿಗಳಿಗೆ, ಬರುವ ಜುಲೈ ತಿಂಗಳು, ದೊಡ್ಡಬಳ್ಳಾಪುರದಲ್ಲಿ ಟೆಲಿಸ್ಕೋಪ ತಯಾರಿ ತರಬೇತಿಯನ್ನು ಆಯೋಜಿಸಲಾಗಿದೆ. ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿ ತ್ತು, ಬೆಂಗಳೂರು ಇದರ ವತಿಯಿಂದ, ಅಧ್ಯಕ್ಷರಾದ ಡಾಕ್ಟರ ಹುಲೀಕಲ್ ನಟರಾಜ ಅವರ ನೇತೃತ್ವದಲ್ಲಿ, 'ನಾನು ವಿಜ್ಞಾನಿ' ಕಾರ್ಯಕ್ರಮ ನಡೆಯಲಿದೆ, 250 ಶಾಲೆಗಳಿಗೆ 'ಶಾಲೆಗೊಂದು ಟೆಲಿಸ್ಕೋಪ್' ವಿತರಿಸುವ, ಈ ಯೋಜನೆ ಬಗ್ಗೆ ಹೆಚ್ಚಿನ ಮಾಹಿತಿ ನೀಡಿದ್ದಾರೆ, ಪರಿ ತ್ತಿನ ಆಡಳಿತ ಮಂಡಳಿ ಸದಸ್ಯರಾದ, ಗೋಕಾಕದ ಬಸವರಾಜ ಹಟ್ಟಿಗೌಡರ. .

<><><>

ಧ್ವನಿ: ಬಸವರಾಜ ಹಟ್ಟಿಗೌಡರ 35 ಸೆಕೆಂದುಗಳು

<><><>

ಪ್ರಸಕ್ತ ಸಾಲಿನ, 'ಆರೋಗ್ಯ ಸೇವಾ ರತ್ನ ಪ್ರಶಸ್ತಿ'ಯನ್ನು, ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕು, ಇನಾಮಹೊಂಗಲದ ಡಾಕ್ಟರ್ ಶಿವಯೋಗಿ ಫಕ್ಕೀರಶೆಟ್ಟರ ಅವರಿಗೆ, ಇದೇ 24 ರಂದು, ಕರ್ನಾಟಕ ವಿದ್ಯಾವರ್ಧಕ ಸಂಘ, ರಾ.ಹ. ದೇಶಪಾಂಡೆ ಸಭಾ ಭವನದಲ್ಲಿ, ಪ್ರದಾನಿಸಿ ಗೌರವಿಸಲಿದೆ ಎಂದು, ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ತಿಳಿಸಿದ್ದಾರೆ. 25 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ, ವೈ.ಚಂದ್ರಶೇಖರ ಶಾಸ್ತ್ರಿ ಅವರ ಮಗಳಾದ, ಅನ್ನಪೂರ್ಣಮ್ಮ ಸಿದ್ಧಲಿಂಗಶಾಸ್ತ್ರಿ ಹಿರೇಮಠ ದತ್ತಿ ಅಂಗವಾಗಿ, ಈ ಕಾರ್ಯಕ್ರಮ ಜರುಗಲಿದೆ.

<><><>

ಯೋಗ ಜಿಂಗಲ್ 30 ಸೆಕೆಂದುಗಳು

<><><>

'ಒಂದೇ ಭೂಮಿ, ಒಂದೇ ಆರೋಗ್ಯಕ್ಕಾಗಿ, ಯೋಗ' ಧ್ಯೇಯದೊಂದಿಗೆ, ಆಯುಷ್ ಇಲಾಖೆ 11ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು, ನಾಳೆ ರಾಜ್ಯಾದ್ಯಂತ ಆಯೋಜಿಸಿದೆ.

<><><>

ನಾಳೆ ಬೆಳಗ್ಗೆ, 6 ಗಂಟೆ 45 ನಿಮಿಷಕ್ಕೆ, ಧಾರವಾಡದ ಆರ್.ಎನ್.ಶೆಟ್ಟಿ ಕ್ರೀಡಾಂಗಣದಲ್ಲಿ ಆಯೋಜಿತ, ಸಾಮೂಹಿಕ ಯೋಗಾಭ್ಯಾಸ ಕಾರ್ಯಕ್ರಮಕ್ಕೆ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್, ಚಾಲನೆ ನೀಡಲಿದ್ದಾರೆ

<><><>

ಬೆಂಗಳೂರು ದಕ್ಷಿಣ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿರುವ, ಯೋಗ ದಿನಾಚರಣೆ ಕಾರ್ಯಕ್ರಮವನ್ನು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಉದ್ಘಾಟಿಸಲಿದ್ದಾರೆ. ಮಾಗಡಿಯ ಸಾವನದುರ್ಗ ಬೆಟ್ಟ, ರಾಮನಗರದ ರಾಮದೇವರ ಬೆಟ್ಟ, ಕನಕಪುರದ ಸಂಗಮದಲ್ಲೂ ಯೋಗ ಕಾರ್ಯಕ್ರಮಗಳು ಆಯೋಜಿತವಾಗಿವೆ.

<><><>

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಪ್ರಾಕೃತಿಕ ವಿಕೋಪದಿಂದ ಸಂತ್ರಸ್ತರಾದವರಿಗೆ, ಶೀಘ್ರ ಪರಿಹಾರ ವಿತರಿಸಿ, ಅನುಕೂಲ ಕಲ್ಪಿಸುವಂತೆ, ಜಿಲ್ಲಾ ಉಸ್ತುವಾರಿ ಸಚಿವ ದಿನೇಶ ಗುಂಡೂರಾವ, ಜಿಲ್ಲಾಡಳಿತಕ್ಕೆ ನಿರ್ದೇಶಿಸಿದ್ದಾರೆ.

<><><>

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ನೂತನ ಕಾರ್ಯದರ್ಶಿಯಾಗಿ, 2014ರ ಕರ್ನಾಟಕ ಕೇಡರ್ ಐ.ಎ.ಎಸ್ ಅಧಿಕಾರಿ ನಲಿನ್ ಅತುಲ್ ಅಧಿಕಾರ ಸ್ವೀಕರಿಸಿದರು.

<><><>

ಬೆಂಗಳೂರು ದಕ್ಷಿಣ ಜಿಲ್ಲೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಕಟಿಸಿದ ಗ್ಯಾರಂಟಿ ಯೋಜನೆಗಳ ಸಾಧನೆ ಬಗ್ಗೆಗಿನ, ಕಿರು ಹೊತ್ತಗೆಯನ್ನು ಸಾರಿಗೆ ಮತ್ತು ಮುಜರಾಯಿ ಖಾತೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾ ರೆಡ್ಡಿ ಬಿಡುಗಡೆಗೊಳಿಸಿದರು.

<><><>

ಶಿವಮೊಗ್ಗ ಜಿಲ್ಲೆ, ಭದ್ರಾವತಿ ತಾಲೂಕಿನ ಬಂಡೀಗುಡ್ಡದಲ್ಲಿ, ಆನೆ ತುಳಿತಕ್ಕೊಳಗಾಗಿ, 50 ವರ್ಷದ ಕುಮಾರ ಎಂಬವರು ಮೃತಪಟ್ಟಿದ್ದಾರೆ.

<><><>

ಧರ್ಮದ ಆಧಾರದ ಮೇಲೆ ಶೇಕಡ 15 ರಷ್ಟು, ಮೀಸಲಾತಿ ನೀಡಲು ಮುಂದಾಗಿರುವ, ಕರ್ನಾಟಕ ಸರ್ಕಾರದ ನಿರ್ಧಾರವು, ಸಂವಿಧಾನದ ಸ್ಪ ್ಟ ಉಲ್ಲಂಘನೆಯಾಗಿದೆ ಎಂದು ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನ ಖಾತೆಗಳ ಸಚಿವ ಪ್ರಲ್ಹಾದ್ ಜೋಶಿ ಎಕ್ಸ್ ಖಾತೆಯಲ್ಲಿ ಹೇಳಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.

<><><>